

# ಸಿಂಧು ಸಿನಿಮಾಗೆ ಕಿಶೋರ್ ಸಾಥ್

ನಟಿ ಹರ್ಷಿಕಾ ಪೂಣಚ್ಚ ನಿರ್ದೇಶನದಲ್ಲಿ ಮೂಡಿಬರುತ್ತಿರುವ 'ಚಿ. ಸೌಜನ್ಯ'ಸಿನಿಮಾದಲ್ಲಿ ಪ್ರಮುಖ ಪಾತ್ರಧಾರಿಯಾಗಿ ನಟಿಸುತ್ತಿರುವ ಕಿಶೋರ್, ಮತ್ತೊಬ್ಬ ಪ್ರತಿಭಾನ್ವಿತ ನಟಿ ಹಾಗೂ ನಿರ್ದೇಶಕಿಯ ಸಿನಿಮಾದಲ್ಲಿಯೂ ನಟಿಸುತ್ತಿದ್ದಾರೆ.

'ಆಚಾರ್ & ಕೋ.' ಸಿನಿಮಾ ಖ್ಯಾತಿಯ ನಟಿ ಹಾಗೂ ನಿರ್ದೇಶಕಿ ಸಿಂಧು ಶ್ರೀನಿವಾಸಮೂರ್ತಿ ಅವರ ಹೊಸ ಪ್ರಾಜೆಕ್ಟ್‌ನ ಭಾಗವಾಗಿದ್ದಾರೆ ಕಿಶೋರ್. ಇದೇ ಮೇ ತಿಂಗಳಲ್ಲಿ ಸಿನಿಮಾ ಚಿತ್ರೀಕರಣ ಆರಂಭವಾಗಲಿದೆ.

ಈ ಹೊಸ ಸಿನಿಮಾ ಬಗ್ಗೆ ಮಾತು ಹಂಚಿಕೊಂಡಿರುವ ಕಿಶೋರ್, 'ಸಿಂಧು ಶ್ರೀನಿವಾಸಮೂರ್ತಿಯವರು ಒಂದು ಸೂಕ್ಷ್ಮ ಹಾಗೂ ಆಲೋಚನೆಗೆ ಹಚ್ಚುವಂಥ ಪರಿಕಲ್ಪನೆಯ ಕಥೆಯೊಂದಿಗೆ ಬಂದಿದ್ದಾರೆ. ಹದಿಮೂರು ದಿನಗಳಲ್ಲಿ ನಡೆಯುವ ಕಥೆ ಇದಾಗಿದ್ದು, ಸಾವಿನ ಕುರಿತಾದ, ಅಂತಿಮ ಸಂಸ್ಕಾರ ಹಾಗೂ ಇತರೆ ವಿಧಿವಿಧಾನಗಳ ಕುರಿತಾದ ವಿಚಾರಗಳನ್ನು ಸಿನಿಮಾ ಒಳಗೊಂಡಿದೆ. ವಿಭಿನ್ನ ನಿರೂಪಣಾ ಶೈಲಿಯಿಂದ ಕೂಡಿದ್ದು, ಈ ಸಿನಿಮಾ ಭಾಗವಾಗಲು ನನಗೆ ಬಹಳ ಇಷ್ಟವಾಯಿತು' ಎಂದಿದ್ದಾರೆ.

ಸದ್ಯ ಸಿನಿಮಾ ಪ್ರಿಪ್ರೊಡಕ್ಷನ್ ಹಂತದಲ್ಲಿದ್ದು, ಶೂಟಿಂಗ್‌ಗೆ ಸಿದ್ಧತೆಗಳು ನಡೆಯುತ್ತಿವೆ.

ಈ ಹಿಂದೆ ಸುಮನಾ ಕಿತ್ತೂರು ನಿರ್ದೇಶನದಲ್ಲಿ ನಟಿಸಿದ್ದ ಕಿಶೋರ್ ಇದೀಗ ಹರ್ಷಿಕಾ ಪೂಣಚ್ಚ ಹಾಗೂ ಸಿಂಧು ಶ್ರೀನಿವಾಸಮೂರ್ತಿ ಅವರ ನಿರ್ದೇಶನದ ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ಮಹಿಳಾ ನಿರ್ದೇಶಕರೊಂದಿಗೆ ಕೆಲಸ ಮಾಡುವ ಅನುಭವದ ಕುರಿತು ಮಾತನಾಡಿದ್ದಾರೆ.

'ಕ್ರಿಯಾಶೀಲತೆ ಇದ್ದಾಗ ಜೆಂಡರ್ ಎನ್ನುವುದು ವಿಷಯವಾಗುವುದಿಲ್ಲ. ಪುರುಷರಷ್ಟೇ ಮಹಿಳೆಯರೂ ಸಮರ್ಥರಾಗಿದ್ದಾರೆ. ಇಬ್ಬರ ದೃಷ್ಟಿಕೋನಗಳು ಬೇರೆ ಬೇರೆ. ಮಹಿಳೆಯರು ಕಥೆ ಹೇಳುವ ಶೈಲಿ ಇನ್ನೂ ವಿಭಿನ್ನವಾಗಿರುತ್ತದೆ' ಎಂದು ಹೇಳಿದ್ದಾರೆ. ■





# 'ಮುದ್ದು ರಾಕ್ಷಸಿ' ಮನದ ಮಾತು

'ಏಕ್ ಲವ್ ಯಾ' ಮೂಲಕ ಸಿನಿಮಾರಂಗಕ್ಕೆ ಕಾಲಿಟ್ಟು, ರಾಣ, ಬಾನದಾರಿಯಲ್ಲಿ, ಈಚೆಗೆ ಉಪೇಂದ್ರ ಜೊತೆಗೆ 'ಯುಐ' ಸಿನಿಮಾದಲ್ಲಿ ಅಭಿನಯಿಸಿ ಪ್ರೇಕ್ಷಕರನ್ನು ರಂಜಿಸಿದ ನಟಿ ರೀಷ್ಮಾ ನಾಣಯ್ಯ ಅವರ ಮತ್ತೊಂದು ಬಹು ನಿರೀಕ್ಷಿತ ಸಿನಿಮಾ 'ವಾಮನ' ಬಿಡುಗಡೆಯಾಗುತ್ತಿದೆ.

ಈ ಚಿತ್ರದ 'ಮುದ್ದು ರಾಕ್ಷಸಿ' ಹಾಡು ಈಗಾಗಲೇ ಜನಪ್ರಿಯವಾಗಿದ್ದು, ಧನ್ವೀರ್–ರೀಷ್ಮಾ ನಟಿಸಿರುವ ಈ ಸಿನಿಮಾ ಚಿತ್ರೀಕರಣ 2022ರಲ್ಲಿಯೇ ಆರಂಭಗೊಂಡಿತ್ತು. ಇದೀಗ ಮೂರು ವರ್ಷಗಳ ನಂತರ, ಏಪ್ರಿಲ್ 10ಕ್ಕೆ ಸಿನಿಮಾ ರಿಲೀಸ್ ಆಗುತ್ತಿದೆ.

'ವಾಮನ' ಸಿನಿಮಾ ತಾವು ನಟಿಸಿದ ಎರಡನೇ ಸಿನಿಮಾ ಆಗಿದ್ದು, ಹಲವು ಕಾರಣಗಳಿಂದ ಐದನೇ ಸಿನಿಮಾ ಆಗಿದೆ ಎಂದಿದ್ದಾರೆ ರೀಷ್ಮಾ. ಅಷ್ಟೇ ಅಲ್ಲ, ಇದು ತಮ್ಮ ಮೊದಲ ಕಮರ್ಷಿಯಲ್ ಸಿನಿಮಾ ಆಗಿದ್ದು, ಹೊಸ ಅನುಭವಗಳನ್ನು ನೀಡಿರುವುದಾಗಿ ಹೇಳಿದ್ದಾರೆ.

''ವಾಮನ' ಸಿನಿಮಾ ಕುರಿತು ಮೊದಲು ಸ್ವಲ್ಪ ಗೊಂದಲಗಳಿದ್ದವು. ಆದರೆ ಯಾವಾಗ 'ಮುದ್ದು ರಾಕ್ಷಸಿ' ಹಾಡು ಕೇಳಿದೆನೋ, ಕುತೂಹಲ ಹುಟ್ಟಿಕೊಂಡಿತು. ಈ ಹಾಡು ನಿಜವಾಗಿಯೂ ನನಗೆ ಸಿನಿಮಾದಲ್ಲಿ ಅಭಿನಯಿಸಲು ಹಾಗೂ ಆ ಪಾತ್ರದಲ್ಲಿ ತೊಡಗಲು ಪ್ರೇರಣೆ ನೀಡಿತು. ಸಿನಿಮಾದಲ್ಲಿ ನಟಿಯ ಉಪಸ್ಥಿತಿ ಬಹಳ ಮುಖ್ಯವಾಗಿದೆ. ಈ ಕಥೆ ನನ್ನ ಪಾತ್ರದೊಂದಿಗೆ ಸಾಗುತ್ತದೆ. ಸಿದ್ಧ ಪ್ರೇಮಕಥೆಯಂತಿರದೇ ನಂದಿನಿ ಎಂಬ ನನ್ನ ಪಾತ್ರ ಹೇಗೆ ಕಷ್ಟದ ಪರಿಸ್ಥಿತಿಯಲ್ಲಿ ಗಟ್ಟಿಯಾಗಿ ನಿಲ್ಲುತ್ತದೆ ಎಂಬುದರ ಕುರಿತಾಗಿದೆ'' ಎಂದು ವಿವರಿಸಿದ್ದಾರೆ.

ಮೂರು ವರ್ಷಗಳ ನಂತರ 'ವಾಮನ' ತೆರೆಗೆ ಬರುತ್ತಿದ್ದು, ಸಿನಿಮಾಗೆ ಸಿಗುತ್ತಿರುವ ಬೆಂಬಲದ ಕಾರಣವಾಗಿಯೂ ಖುಷಿಪಟ್ಟಿದ್ದಾರೆ ರೀಷ್ಮಾ.

ಈ ಸಿನಿಮಾ ಬೆನ್ನಲ್ಲೇ ರೀಷ್ಮಾ ಅಭಿನಯದ 'ಕೆಡಿ' ಸಿನಿಮಾ ಕೂಡ ಬಿಡುಗಡೆಗೆ ಸಜ್ಜಾಗುತ್ತಿದೆ. ಸದ್ಯ ಒಳ್ಳೆಯ ಸ್ಕ್ರಿಪ್ಟ್ ಮೇಲೆ ಗಮನಹರಿಸಿರುವುದಾಗಿ ತಿಳಿಸಿದ್ದಾರೆ ಅವರು. ■